ಶ್ರೀ ಕೆ. ಎಚ್. ಪಾಟೀಲ್.—ಸ್ಲಂ ಕ್ಲಿಯರೆನ್ಸ್ ಆಕ್ಟ್ ಪ್ರಕಾರ ಲೇಗರ್ ಅಡಚಣೆ ಇದ್ದರೆ ಕೇಂದ್ರ ಸರ್ಕಾರದವರು ಈಗಾಗಲೇ ಒಂದು ಸ್ಕೀಂ ಮಾಡಿರುವುದರಿಂದ ಸ್ಲಂನಲ್ಲಿ ಇರತಕ್ಕ ಜನರ ಸಲುವಾಗಿ ಅವರ ವಾಸದ ಸೌಕರ್ಯವನ್ನು ಮಾಡಲು 100ಕ್ಕೆ 50 ಭಾಗವನ್ನು ಅವರು ಕೊಡುತ್ತಾರೆ ಉಳಿದ ಹಣವನ್ನು ಮುನಿಸಿಪಾಲಿಟಿಯವರು ಮತ್ತು ಸರ್ಕಾರದವರು ಕೊಡಬೇಕು. ಈ ರೀತಿ ಹಣವನ್ನು ಅವರಿಂದ ತೆಗೆದುಕೊಳ್ಳಲಿಕ್ಕೆ ಬರುತ್ತದೆ, ಅದಕ್ಕೆ ಪ್ರಯತ್ನ ಮಾಡುತ್ತಾ ಇದ್ದೀರಾ ?

ಶ್ರೀ ಆರ್. ಎಂ. ಪಾಟೀಲ್.—ಪ್ರಯತ್ನ ಮಾಡಲಾಗುವುದು. ಅದನ್ನು ವಿಚಾರ ಮಾಡುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಸಿದ್ಧಯ್ಯ ಕಾಶೀಮಠ.—ಕೊಳಚೆ ಪ್ರದೇಶದಲ್ಲಿ ಈ ಮಳೆಗಾಲದಲ್ಲಿ ಅಲ್ಲಿರಲ್ಲಿಕ್ಕೆ ಅಸಾಧ್ಯ. ಅದುದರಿಂದ ಕೂಡಲೆ ಕಾರ್ಯಕ್ರಮ ತೆಗೆದುಕೊಂಡು ಅವರಿಗೆ ನಿವೇಶನವನ್ನು ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಇದು ಹೊಲನು ಪ್ರದೇಶವಾಗಿದೆ, ಸದ್ಯಕ್ಕೆ ಹಣವಿಲ್ಲ ಮಾಡುವುದ ಕ್ಯಾಗುವುದಿಲ್ಲ ಎಂಬ ಧೋರಣೆಯಿಂದ ಟೆಂಪರ್ ಕಮಿಟಿಯವರು ಮುನಿಸಿಪಾಲಿಟಿಯವರಿಗೆ ವಿನಂತಿ ಮಾಡಿಕೊಂಡ ಪ್ರಕಾರ ಆ ವಿನಂತಿಗೆ ಮಾನ್ಯ ಮಾಡಿ ಮುನಿಸಿಪಾಲಿಟಿಯವರು ಪ್ರತಿ ವರ್ಷ ಮೂರು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಅಗ್ರಿಮೆಂಟ್ ಮಾಡಿಕೊಂಡರು. ಸ್ಲಂ ಕ್ಲಿಯರೆನ್ಸ್ ಆಕ್ಟ್‌ನ ಮಹತ್ವದ ಕಲಮಿನ ಪ್ರಕಾರ ಅದು ಕಾನೂನು ಬಾಹಿರವಾಗಿದೆ ಎಂದು ಹೈಕೋರ್ಟಿನವರು ನಿರ್ಣಯ ಮಾಡಿದ್ದರಿಂದ ಈ ಕಾರ್ಯಕ್ರಮ ಮುಂದುವರಿಯದೆ ಉಳಿದಿದೆ. ಸುಪ್ರೀಂ ಕೋರ್ಟಿನಲ್ಲಿ ಏನು ನಿರ್ಣಯ ಆಗುತ್ತದೆಯೋ ಅದರ ಪ್ರಕಾರ ಕ್ರಮ ತೆಗದುಕೊಳ್ಳುತ್ತೇವೆ.

ಶ್ರೀ ಕೆ. ಎಚ್. ಪಾಟೀರ್.—ಅಲ್ಲಿರತಕ್ಕ ಜನಗಳಿಗೆ ಬೇರೆ ವಸತಿ ಕಟ್ಟಲಿಕ್ಕೆ ಬೇಕಾದ ಸ್ಥಳವನ್ನು ತೀವ್ರ ಅಕ್ಯೂರ್ ಮಾಡಿಕೊಳ್ಳಲಿಕ್ಕೆ ಮುನಿಸಿಪಾಲಿಟಿಯವರಿಗೆ ಸಲಹೆ ಕೊಡಬಲ್ಲರಾ ?

ಶ್ರೀ ಆರ್. ಎಂ. ಪಾಟೀರ್.—ಮುನಿಸಿಪಾಲಿಟಿಯವರು ಮನಸ್ಸು ಮಾಡಿದರೆ ಕಾನೂನಿನ ಅವಶ್ಯಕತೆಯೇ ಬೀಳುವುದಿಲ್ಲ. ಅವರು ಮನಸ್ಸು ಮಾಡಿಲ್ಲವಾದ ಕಾರಣ ಆ ಊರಿನಲ್ಲಿ ಈ ಸ್ಲಂ ಬಹಳ ದಿವಸದಿಂದ ಉಳಿದಿದೆ.

Employees State Insurance Hospital, Hubli

*Q.—355. Sri SADASHIV SHETTAR (Hubli).—

Will the Minister for Home and Labour be pleased to state :—

whether the Employees State Insurance Hospital in Hubli has been provided with suitable building and proper medical equipment and adequate staff ?

A.—Sri M. V. RAMA RAO (Minister for Home and Labour).—

Yes.

Sri S. S. SHETTAR.—Is it true that in the month of April one worker attached to one of the Mills in Hubli died and there was some Satyagraha in front of the E.S.I. Hospital ?

†Sri M. V. RAMA RAO.—I will answer that question if a separate question is put.

Sri S. S. SHETTAR.—Is Government aware that this particular hospital is situated in one of the Dharmashala Buildings of Hubli-Dharwar Municipalty ?

---

†Indicates that the remarks or speaches have not been revised by the member concerned.

Sri M. V. RAMA RAO.—This dispensary is located in a guest house, a building which was formerly the Hubli Guest house.

ಶ್ರೀ ಸಿದ್ದಯ್ಯ ಕಾಶೀಮಠ.—ಈ ವರ್ಷ ಯಾವ ಯಾವ ಔಷಧಿ ಒದಗಿಸಿದ್ದೀರಿ ಎಂಬುದನ್ನು ಹೇಳುತ್ತೀರಾ ?

Sri M. V. RAMA RAO.—For these particulars a separate question will have to be addressed to the Minister for Health.

Sri M. S. KRISHNAN.—Has Government received any complaint from the workers in Hubli as well as in respect of the E.S.I. workers in Hubli and Bangalore in regard to the bad medical facilities and shabby treatment there ?

Sri M. V. RAMA RAO.—In regard to Bangalore, a separte question will have to be asked.

Sri M. S. KRISHNAN.—He could answer about Hubli.

Sri M. V. RAMA RAO.—No complaint has been received by Government.

ಶ್ರೀ ಎಸ್. ಎಸ್. ಶೆಟ್ಟರ್.—ಹುಬ್ಬಳ್ಳಿಯಲ್ಲಿ ಈ ಆಸ್ಪತ್ರೆಯನ್ನು ಕಟ್ಟಲು ಒಂದು ಬೇರೆ ಜಾಗವನ್ನು ಕೊಂಡುಕೊಂಡಿದ್ದರೂ ಅಲ್ಲಿ ಕಟ್ಟಡವನ್ನು ಕಟ್ಟದಿರುವುದಕ್ಕೆ ಕಾರಣವೇನು ?

Sri M. V. RAMA RAO.—The proposal to construct an E.S.I. Hospital at Hubli has progressed and we expect to be able to undertake construction very shortly.

Allowance to Home Guards.

*Q.—382. Sri K. M. THAMMAIAH (Kadur).—

Will the Minister for Home and Labour be pleased to state :—

(*a*) whether any amount is being paid by Government to the Home Guards for the voluntary service rendered by them ;

(*b*) whether they are aware that the meagre amount now being paid to them is not sufficient even to meet their ordinary expenditure ;

(*c*) whether they would take steps to pay them more ?

*A.—Sri M. V. RAMA RAO (Minister for Home and Labour).—

(*a*) Yes. A duty allowance of Rs. 2-50 per head per day is being paid at present.

(*b*) and (*c*) The adequacy or otherwise of the present rate of allowance is under examination.

ಶ್ರೀ ಕೆ. ಎಂ. ತಮ್ಮಯ್ಯ.—ಉತ್ತರದಲ್ಲಿ ಒಂದು ದಿನಕ್ಕೆ ಒಬ್ಬರಿಗೆ ಎರಡೂವರೆ ರೂಪಾಯಿಗಳ ಕರ್ತವ್ಯ ಭತ್ಯವನ್ನು ಕೊಡಲಾಗುತ್ತಿದೆ ಎಂದು ಹೇಳಿದೆ. ಇದನ್ನು ಕೊಡುವುದು ಅಧಿಕಾರಿಗಳಿಗೋ ಅಥವಾ ಸಿಬ್ಬಂದಿವರ್ಗಕ್ಕೋ ?

†ಶ್ರೀ ಎಂ. ವಿ. ರಾಮರಾವ್.—ಹೋಂ ಗಾರ್ಡುಗಳಿಗೆ ಎಂದು ಉತ್ತರದಲ್ಲೇ ತಿಳಿಸಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ಈ ಹೋಂ ಗಾರ್ಡುಗಳಿಗೆ ಕೊಡತಕ್ಕ ತರಬೇತು ಆ ಪೋಲೀಸಿನವರ ಹಾಗೂ ಸಿಪಾಯಿಗಳ ತರಬೇತಿಗೆ ಸಮಾನಾಗಿರುವುದರಿಂದ ಇವರಿಗೆ ಮದ್ರಾಸ್ ಮತ್ತು ಬೊಂಬಾಯಿಗಳಲ್ಲಿ ಕೊಡುತ್ತಿರುವಂತೆ ಹೆಚ್ಚಿನ ಭತ್ಯವನ್ನು ಏಕೆ ಕೊಡಬಾರದು ?